ವಸಂತದ ಮಳೆ
ಚಂದದ ಹುಡುಗಿ
ಆಕಳಿಸುತಿಹಳು




ಮನೆಯಿರದ ಕಾಗೆ
ಹಾರಿಹೋಗಿದೆ
ಆಷಾಡದ ಗಾಳಿಗೆ



ಮಂಜಿನೊಂದು ಮಣಿ
ಹುಡುಕುತ್ತ ಅವಳು
ಚಿವುಟಿದಳು ಮಗುವ

ರಾತ್ರಿಯ ಇಬ್ಬನಿ–
ಕುದುರೆಗೆ ನೆನಪು
ಸೇತುವೆಯ ತೂತು



ಜೋರು ಮಳೆಯ ನಡುವೆ
ನಿಂತಿದ್ದಾನೆ
ಕುರುಡನೊಬ್ಬ




ಬುದ್ಧನ ಕಲ್ಲ ಕೈ
ಬಯಲಲ್ಲಿ
ಕುಕ್ಕುರುಬಡಿದ ಕಪ್ಪೆ

ಹಿಮ ಸುರಿದ ದಿನ
ಆಡಲು ಆಗಾಗ ಹೊರಗೆ
ಬರುವುದು ನೊಣ

ಸುಮೊ ಜಟ್ಟಿಗಳ ಕುಸ್ತಿ–
ಕಪ್ಪೆಗಳು ಕೂಡ ಜಯಜಯವೆನ್ನುತ್ತಿವೆ
ಮರಗಳಲ್ಲಿ



ಬಸವನಹುಳುವೆ ಒಳಗೆ ಬಾ
ಬದುಕು ನನ್ನ ಜೊತೆ
ಚಳಿಗಾಲದ ಮೊದಲ ಮಳೆಯಲ್ಲಿ



● **ಮೂಲ : ಜಪಾನಿ ಕವಿ ಇಸ್ಸಾ, ಕನ್ನಡಕ್ಕೆ : ಡಾವೆಂಕಿ**